### ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದ ಸಚಿವ ಸಂತೋಷ ಲಾಡ್

# ಕಾರ್ಮಿಕ ಯೋಜನೆಯ ಲಾಭ ನೈಜ ಫಲಾನುಭವಿಗೆ ದೊರಕಿಸಿ

**■ವಿಜಯಸಾಕ್ಷಿ ಸುದ್ದಿ, ವಿಜಯಪುರ**

ಕಾರ್ಮಿಕ ಕಲ್ಯಾಣಕ್ಕಾಗಿ ಸರ್ಕಾರ ರೂಪಿಸಿರುವ ಹಲವು ಯೋಜನೆ-ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ನೈಜ ಫಲಾನುಭವಿಗಳಿಗೆ ಯೋಜನೆಯ ಲಾಭ ದೊರಕಿಸಲು ಕ್ರಮ ವಹಿಸುವಂತೆ ಕಾರ್ಮಿಕ ಖಾತೆ ಸಚಿವರಾದ ಸಂತೋಷ್ ಲಾಡ್ ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.



ನಗರದ ಹೊಸ ಪ್ರವಾಸಿ ಮಂದಿರದಲ್ಲಿ ಮಂಗಳವಾರ ವಿವಿಧ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕಾರ್ಮಿಕ ಕಲ್ಯಾಣ ಇಲಾಖೆಯಲ್ಲಿ ನೋಂದಾಯಿಸಿರುವ ಕಾರ್ಮಿಕರಿಗೆ ಹಲವು ಯೋಜನೆಗಳಿದ್ದು, ಇದರ ಲಾಭ ನೈಜ ಫಲಾನುಭವಿಗೆ ತಲುಪುತ್ತಿರುವ ಕುರಿತು ಅಧಿಕಾರಿಗಳು ಪರಿಶೀಲನೆ ನಡೆಸಬೇಕು. ಕಾರ್ಮಿಕ ಇಲಾಖೆ ಯೋಜನೆಯ ದುರುಪಯೋಗವಾಗದಂತೆ ನೋಡಿಕೊಂಡು ನೈಜ ಕಾರ್ಮಿಕರಿಗೆ ಸವಲತ್ತುಗಳು ದೊರೆಯುವಂತೆ ಕ್ರಮ ವಹಿಸಬೇಕು. ಕಾರ್ಮಿಕರಿಗಿರುವ ವಿವಿಧ ಯೋಜನೆಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತಿಳುವಳಿಕೆ ಮೂಡಿಸಬೇಕು ಎಂದು ಹೇಳಿದರು.

ಜಿಲ್ಲೆಯಲ್ಲಿ ಬಾಲಕಾರ್ಮಿಕರ ರಕ್ಷಣೆ ಪ್ರಕರಣವನ್ನು ವಿಶೇಷವಾಗಿ ಪರಿಗಣನೆಗೆ ತೆಗೆದುಕೊಂಡು ಕಾರ್ಯನಿರ್ವಹಿಸಬೇಕು. ರಾಜ್ಯದ ಬಾಲಕಾರ್ಮಿಕರ ಪ್ರಕರಣಗಳನ್ನು ಗಮನಿಸಿದಾಗ ಪ್ರತಿ ತಿಂಗಳು 2 ರಿಂದ 3 ಬಾಲಕಾರ್ಮಿಕರ ಪ್ರಕರಣಗಳು ಉತ್ತರ ಕರ್ನಾಟಕ ಭಾಗದಲ್ಲಿರುತ್ತವೆ. ಈ ಪ್ರಮಾಣ ಕಳೆದ 15 ವರ್ಷಗಳಿಗೆ ಹೋಲಿಕೆ ಮಾಡಿದಾಗ ಪ್ರಕರಣದ ಪ್ರಮಾಣ ಹೆಚ್ಚಾಗುತ್ತಿದ್ದು, ವಿಶೇಷ ಗಮನ ಹರಿಸಿ ಬಾಲಕಾರ್ಮಿಕರ ರಕ್ಷಣೆಗೆ ಮುಂದಾಗಬೇಕು ಎಂದು ಅವರು ಸೂಚಿಸಿದರು.

ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸರ್ವೇ ಕಾರ್ಯ ಕೈಗೊಳ್ಳಲಾಗಿದ್ದು, ಸರ್ವೇ ಅಂಕಿ ಅಂಶಗಳ ಪ್ರಕಾರ ಕೇವಲ 123 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಈ ಮಕ್ಕಳ ಪಾಲಕ-ಪೋಷಕರ ಮನವೊಲಿಸಿ ಶಾಲಾ ನೋಂದಣಿಗೆ ಕ್ರಮ ವಹಿಸಬೇಕು. ಜಿಲ್ಲೆಯಲ್ಲಿ ಕಾಲಕಾಲಕ್ಕೆ ವಿವಿಧೆಡೆ ತಪಾಸಣೆ ನಡೆಸಬೇಕು. ಯಾವುದೇ ಬಾಲಕಾರ್ಮಿಕರು ಇರದಂತೆ ಕಟ್ಟೆಚ್ಚರ ವಹಿಸಬೇಕು. ಜನರಲ್ಲಿ ಈ ಕುರಿತು ಸೂಕ್ತ ಜಾಗೃತಿ ಮೂಡಿಸಬೇಕು. ಮೇಲಿಂದ ಮೇಲೆ ವಿವಿಧೆಡೆ, ಡಾಭಾ, ಕಿರಾಣಿ, ಅಂಗಡಿ, ಹೊಟೇಲ್ ಸೇರಿದಂತೆ ವಿವಿಧೆಡೆ ದಾಳಿ ನಡೆಸಿ, ಸೂಕ್ತ ತಿಳುವಳಿಕೆ ನೀಡಬೇಕು. ಆದಾಗ್ಯೂ, ಬಾಲಕಾರ್ಮಿಕರನ್ನು ನೇಮಿಸಿಕೊಂಡಲ್ಲಿ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಈಗಾಗಲೇ ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಪ್ರತಿ ತಿಂಗಳು ಪಾಲಕ-ಪೋಷಕರ ಸಭೆ ನಡೆಸಿ ಬಾಲಕಾರ್ಮಿಕ ಕುರಿತು ಸೂಕ್ತ ಜಾಗೃತಿ ಅರಿವು ಮೂಡಿಸಲಾಗುತ್ತಿದೆ. ಪಾಲಕರ ಮನವೊಲಿಸಿ ಮಕ್ಕಳ ಶಾಲಾ ದಾಖಲಾತಿಗೆ ಕ್ರಮ ವಹಿಸುತ್ತಿರುವ ಕುರಿತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಸಚಿವರು, ಸಭೆಗಳಲ್ಲಿ ಕೇವಲ ಮಕ್ಕಳ ಪಾಲಕರು-ಪೋಷಕರು ಮಾತ್ರ ಭಾಗವಹಿಸಿರುತ್ತಾರೆ. ಇವರ ಮನವೊಲಿಕೆ ಮಾತ್ರವಲ್ಲದೇ, ಜಿಲ್ಲೆಯ ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಸಮನ್ವಯತೆಯನ್ನು ಸಾಧಿಸಿಕೊಂಡು ಅವರಲ್ಲಿಯೂ ಜಾಗೃತಿ ಮೂಡಿಸಬೇಕು. ಕೇವಲ ಸಭೆಗಳನ್ನು ನಡೆಸದೇ ಪರಿಣಾಮಕಾರಿಯಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಸೂಕ್ತ ಜಾಗೃತಿ ಮೂಡಿಸಿ ಬಾಲಕಾರ್ಮಿಕರು ಇರದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಕೇವಲ ಒಂದು ದಿನ ನೆಪ ಮಾತ್ರಕ್ಕೆ ಪರಿಶೀಲನೆ ನಡೆಸದೇ ನಿರಂತರವಾಗಿ ಜಿಲ್ಲೆಯ ವಿವಿಧೆಡೆ ಭೇಟಿ ನೀಡಿ, ಬಾಲಕಾರ್ಮಿಕರ ಪತ್ತೆ ಹಚ್ಚಬೇಕು. ಜನರಲ್ಲಿ ಸೂಕ್ತ ತಿಳುವಳಿಕೆ ಮೂಡಿಸಬೇಕು. ಎನ್‌ಜಿಒ, ರೋಟರಿ ಕ್ಲಬ್, ಲಾಯನ್ಸ್ ಕ್ಲಬ್‌ದ ಪ್ರತಿನಿಧಿಗಳೊಂದಿಗೆ ಪ್ರತಿ 3ತಿಂಗಳಿಗೊಮ್ಮೆ ಒಂದು ಸಲ ಢಾಬಾ, ಕಿರಾಣಿ ಅಂಗಡಿ ಗ್ಯಾರೇಜ್‌ಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಬೇಕು. ಕೇವಲ ಒಂದು ಸಲ ಬೇಟಿ ನೀಡಿ ತಿಳುವಳಿಕೆ ಮಾಡಿದರೆ ಮನವೊಲಿಕೆಯಾಗಲ್ಲ, ಹಾಗಾಗಿ ನಿರಂತರವಾಗಿ ಎರಡೂ ಮೂರು ಸಲ ಭೇಟಿ ನೀಡಿ ಅವರ ಮನವೊಲಿಸಬೇಕು. ತಿಳುವಳಿಕೆ ಮೂಡಿಸಿದಾಗ ಜನರಲ್ಲಿಯೂ ಜಾಗೃತಿ ಮೂಡಲಿದೆ. ತೀವ್ರ ಜಾಗೃತಿ ಮೂಡಿಸಲು ಮುಂಚಿತವಾಗಿಯೇ ಕ್ರೀಯಾಯೋಜನೆಯೊಂದನ್ನು ರೂಪಿಸಿಕೊಳ್ಳಬೇಕು. ಕ್ರೀಯಾಯೋಜನೆ ರೂಪರೇಷೆಯಂತೆ ಪ್ರತಿ ದಿನ ವಿವಿಧ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಬಾಲಕಾರ್ಮಿಕ ಸ್ಥಳಗಳಿಗೆ ಖುದ್ದಾಗಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಭೇಟಿ ನೀಡಬೇಕು ಇದರಿಂದ ಜನರಲ್ಲಿ ತೀವ್ರ ಅರಿವೂ ಮೂಡಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಸಭೆಯಲ್ಲಿ ಸಚಿವ ಶಿವಾನಂದ ಪಾಟೀಲ, ನಾಗಠಾಣ ಮತಕ್ಷೇತ್ರದ ಶಾಸಕರಾದ ವಿಠ್ಠಲ ಕಟಕದೊಂಡ, ಕಾರ್ಮಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹಿಸಿನ್, ಕಾರ್ಮಿಕ ಆಯುಕ್ತರಾದ ಗೋಪಾಲ ಕೃಷ್ಣ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಮಂಡಳಿ ಕಾರ್ಯದರ್ಶಿ ಶ್ರೀಮತಿ ಭಾರತಿ, ಜಿಲ್ಲಾಧಿಕಾರಿ ಟಿ.ಭೂಬಾಲನ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವನೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಕಾರ್ಮಿಕ ಅಧಿಕಾರಿ ಎಸ್.ಜಿ.ಖೈನೂರ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

> ಪ್ರತಿ ತಿಂಗಳು ಒಂದು ಬಾರಿ ಜಿಲ್ಲೆಯ ವಿವಿಧ ಜನಪ್ರತಿನಿಧಿ, ಹಿರಿಯ ಅಧಿಕಾರಿಗಳೊಂದಿಗೆ ಬಾಲಕಾರ್ಮಿಕ ರಕ್ಷಣೆ ಕುರಿತು ಸಭೆ ನಡೆಸಿ ಕೈಗೊಂಡ ಕ್ರಮಗಳ ಕುರಿತ ಹಾಗೂ ಕೈಗೊಳ್ಳಬಹುದಾದ ಕ್ರಮಗಳ ಕುರಿತು ಪರಿಶೀಲನೆ ನಡೆಸಬೇಕು. ಹಿರಿಯ ಅಧಿಕಾರಿಗಳಿಂದ ಜನಪ್ರತಿನಿಧಿಗಳಿಂದ ಸೂಕ್ತ ಸಲಹೆ ಪಡೆದುಕೊಂಡು ಬಾಲಕಾರ್ಮಿಕರ ರಕ್ಷಣೆ ಕಾರ್ಯಕ್ರಮ ಅನುಷ್ಠಾನಗೊಳಿಸಬೇಕು.
>
> **-ಸಂತೋಷ ಲಾಡ್**, ಸಚಿವರು.

ಅಂಗನವಾಡಿ, ಬಿಸಿಯೂಟ ಕಾರ್ಯಕ್ರಮಗಳಿಂದ ಗುಳೆ ಹೋಗುವ ಪ್ರಮಾಣ ಸ್ವಲ್ಪ ಕಡಿಮೆಯಾಗಿದೆ. ಇಂತಹ ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸಿ ಗುಳೆಹೋಗುವುದನ್ನು ತಪ್ಪಿಸಬಹುದಾಗಿದ್ದು, ಬಾಲಕಾರ್ಮಿಕ ಕುರಿತು ಪರಿಣಾಮಕಾರಿ ಅನುಷ್ಠಾನಗೊಳಿಸಿ ಜಾಗೃತಿ ಮುಡಿಸಬೇಕು. ಪ್ರತಿ ಜಿಲ್ಲೆಯಲ್ಲಿ ಕೈಗೊಂಡ ಕ್ರಮಗಳ ಕುರಿತು ಮಾಹಿತಿಯನ್ನು ಪ್ರತಿ ತಿಂಗಳು ಜಿಲ್ಲೆಯಿಂದ ಸಲ್ಲಿಸಬೇಕು. ಇತ್ತೀಚೆಗೆ ಹುಟ್ಟುಹಬ್ಬದ ಕಾರ್ಯಕ್ರಮಗಳಲ್ಲಿ ಸ್ಪಾರ್ಕಲ್ ಬರ್ತಡೇ ಕ್ಯಾಂಡಲ್‌ಗಳ ಬಳಕೆ ಮಾಡುತ್ತಿರುವುದರಿಂದ ಕೆಲವು ಕಡೆ ಅಗ್ನಿ ಅವಘಡಗಳು ಸಂಭವಿಸಿದೆ. ಈ ಕುರಿತು ಗಮನ ಹರಿಸಿ ಇವುಗಳ ಬಳಕೆಗೆ ಅನುಮತಿ ಪಡೆಯುವ ಕುರಿತು ಕ್ರಮ ವಹಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

## ಮಂತ್ರಮುಗ್ಧಗೊಳಿಸಿದ ಸಂಗೀತ ಭಜನೆ ಕಾರ್ಯಕ್ರಮ



**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಮಹಾತ್ಮ ಗಾಂಧೀಜಿ ಅವರ 154ನೇ ಜಯಂತಿ ಅಂಗವಾಗಿ ಗಾಂಧಿ ಪ್ರಿಯ ಸಂಗೀತ ಭಜನೆ ಕಾರ್ಯಕ್ರಮ ಜರುಗಿದವು.

ಉಷಾ ಕಾರಂತ ಹಾಗೂ ವೆಂಕಟೇಶ ಅಲ್ಕೋಡ ಮತ್ತು ಸಂಗಡಿಗರಿಂದ ಕಾಯೋಜಿ ಮೈನೆ ರಾಮಲಖನ್ ಜಿಯಾ, ರಘುಪತಿ ರಾಘವ ರಾಜಾರಾಂ ಹಾಗೂ ವೈಷ್ಣವ ಜನತೋ ದೇನೆ ಕಹಿಯೇ ಭಜನೆಗಳ ಜುಗಲ ಬಂದಿ ಕಾರ್ಯಕ್ರಮವು ನೆರೆದ ಸಭಿಕರನ್ನು ಮಂತ್ರಮುಗ್ಧಗೊಳಿಸಿತು.

ಗಾಂಧೀಜಿಯವರ ಪ್ರಿಯ ಭಜನೆಗಳಲ್ಲೊಂದಾದ ವೈಷ್ಣವ ಜನತೋ ಗೀತೆಯನ್ನು ಹಿಂದಿ ಹಾಗೂ ಕನ್ನಡದಲ್ಲಿ ಸಂಗೀತ ಕಲಾವಿದರಾದ ಉಷಾ ಕಾರಂತ ಹಾಗೂ ವೆಂಕಟೇಶ ಅಲ್ಕೋಡ ಅವರು ಜುಗಲ್ ಬಂದಿ ಮೂಲಕ ಪ್ರಸ್ತುತ ಪಡಿಸಿದ ಶೈಲಿ ನೆರೆದ ಅತಿಥಿ ಮಹೋದಯರು ಹಾಗೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

## ಬಾಪೂಜಿಗೆ ಕರ್ನಾಟಕದ ಮೇಲೆ ಅಪಾರ ಪ್ರೀತಿಯಿತ್ತು

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಗಾಂಧೀಜಿಯವರ ತತ್ವಾದರ್ಶ, ಮೌಲ್ಯಗಳನ್ನು ಜೀವನದಲ್ಲಿ ಪ್ರತಿಯೊಬ್ಬರೂ ಅಳವಡಿಸಿಕೊಂಡರೆ ಗಾಂಧೀಜಿ ಜಯಂತಿಯ ಆಚರಣೆ ಸಾರ್ಥಕವಾಗುತ್ತದೆ ಎಂದು ಮುಖ್ಯ ಶಿಕ್ಷಕ ಎಸ್.ಬಿ ಗವಿ ಹೇಳಿದರು.



ಸಮೀಪದ ಜಕ್ಕಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಸಂಕೀರ್ಣ ಶಾಲೆಗಳ ಸಂಯುಕ್ತ ಆಶ್ರಯದಲ್ಲಿ ಶಾಲಾ ಆವರಣದ ಗಾಂಧಿ ಭವನದಲ್ಲಿ ನಡೆದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 154ನೇ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ 119ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕರ್ನಾಟಕದ ಮೇಲೆ ಅತಿಯಾದ ಪ್ರೀತಿ ಬಾಪೂಜಿ ಅವರಿಗಿತ್ತು. ತಮ್ಮ ಜೀವಿತಾವಧಿಯಲ್ಲಿ 18 ಬಾರಿ ಕರ್ನಾಟಕಕ್ಕೆ ಭೇಟಿ ನೀಡಿದ್ದಾರೆ, 142 ಸ್ಥಳಗಳ ಸಂದರ್ಶನ ಮಾಡಿದ್ದಾರೆ. ಗದಗ ಜಿಲ್ಲೆಗೂ ಕೂಡ ಎರಡು ಬಾರಿ ಸಂದರ್ಶನ ನೀಡಿರುವುದು ನಮ್ಮೆಲ್ಲರ ಸೌಭಾಗ್ಯ. ಅಂದಾನಪ್ಪ ದೊಡ್ಡಮೇಟಿಯವರ ಸ್ಫೂರ್ತಿಯಿಂದ ಜಕ್ಕಲಿ ಗ್ರಾಮಕ್ಕೆ ಆಗಮಿಸಿ ಜನಜಾಗೃತಿ ಮೂಡಿಸಿದ್ದಾರೆ ಎಂದು ಹೇಳಿದರು.

ಮುಖ್ಯ ಶಿಕ್ಷಕ ಎಸ್.ಕೆ ಪ್ರಭುಸ್ವಾಮಿಮಠ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಕುರಿತು ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷೆ ಲಲಿತಾ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ ಅಧ್ಯಕ್ಷೆ ಗಂಗಮ್ಮ ಜಂಗಣ್ಣವರ, ಶಿವರಾಜ ಮುಗಳಿ, ಕೆಜಿಎಸ್ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷೆ ರೇಣುಕಾ ಜಕ್ಕಲಿ, ಸದಸ್ಯರಾದ ಯಲ್ಲಪ್ಪ ಮಡಿವಾಳರ, ಮಂಜುನಾಥ ಪಲ್ಲೇದ, ರೇಖಾ ಆದಿ, ಅಶೋಕ್ ಭಜಂತ್ರಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಶಾಲಾ ಮಕ್ಕಳು ಗಾಂಧೀಜಿಯವರ ಕುರಿತು ಭಾಷಣ ಮಾಡಿದರು. ಇದೇ ಸಂದರ್ಭದಲ್ಲಿ ಮಕ್ಕಳಿಗೆ ಟೈ, ಮತ್ತು ಬೆಲ್ಟ್‌ಗಳನ್ನು ವಿತರಿಸಲಾಯಿತು. ಶಿಕ್ಷಕರಾದ ಎ.ಪಿ ಶೆಟ್ಟರ್, ಎ.ಬಿ ಜಕ್ಕಲಿ, ವಿ.ಎಸ್ ದಿಂಡೂರ, ಎಸ್.ಎಸ್ ಯಲ್ಲರಡ್ಡಿ, ಪಿ.ಜಿ ಹುಯಿಲಗೋಳ ಉಪಸ್ಥಿತರಿದ್ದರು. ಮಕ್ಕಳು ಪ್ರಾರ್ಥಿಸಿದರು, ಎ.ಎಂ ಸೂರ್ಯಭಟ್ಟನವರ ನಿರೂಪಿಸಿದರು. ಎಸ್.ಎ ಪಲ್ಲೇದ ವಂದಿಸಿದರು.

## ನಗರಸಭೆಯಲ್ಲಿ ಮಹಾತ್ಮ ಗಾಂಧೀಜಿ ಜಯಂತಿ



**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರಸಭೆಯಲ್ಲಿ ಮಹಾತ್ಮ ಗಾಂಧೀಜಿಯವರ 154ನೇ ಜಯಂತಿಯನ್ನು ಆಚರಿಸಲಾಯಿತು. ಮಹಾತ್ಮ ಗಾಂಧೀಜಿಯವರ ಭಾವಚಿತ್ರಕ್ಕೆ ನಗರಸಭಾಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಪ್ರಕಾಶ್, ಪೌರಾಯುಕ್ತ ಗಂಗಪ್ಪರವರು ಪುಷ್ಪಾರ್ಚನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಭಿಯಂತರರಾದ ಎಂ.ಎಚ್.ಎ ಬಂಡಿವಡ್ಡರ್, ಟಿ.ಹೆಚ್ ದ್ಯಾವನೂರ, ಕಚೇರಿಯ ವ್ಯವಸ್ಥಾಪಕ ಪರಶುರಾಮ್ ಶೇರಖಾನ್, ಸದಸ್ಯರಾದ ವಿದ್ಯಾವತಿ ಗಡಗಿ, ನಮಾಜಿ, ಸಿಬ್ಬಂದಿಗಳಾದ ಎ.ಎನ್ ಪುಣೇಕರ, ನಾಗರಾಜ್ ಗುರಣ್ಣವರ್, ಪರಿಸರ ಅಭಿಯಂತರ ಆನಂದ್ ಬದಿ, ಎಂ.ಎಂ ಮಕಾನದಾರ, ಹೇಮಶ ಯುಟ್ಟಿ, ಸಿ.ಆರ್ ಹಾದಿಮನಿ, ಕಂಚಪ್ಪ ಪೂಜಾರಿ, ಸಣ್ಣಪ್ಪ ಬೋಳಮ್ಮನವರ್, ಅರವಿಂದ ಕುರ್ತಕೋಟಿ, ಸಂಕನಗೌಡ್ರು, ಶ್ರೀಮತಿ ಮಕಾನದಾರ, ಶ್ರೀಮತಿ ಯಾದವಾಡ, ಸಂಜು ಅಗಸಿಮನಿ, ಆಂಜನಯ್ಯ ಬಳ್ಳಾರಿ, ಎಸ್.ವ್ಹಿ ತೋಟಗಿ, ಕಡೇಮನಿ, ಹಿರೇಮಠ, ಎಂ.ಕೆ ಗುಡಿಸಾಗರ, ರಾಜು ಕಾಗನೂರ, ರಾಕೇಶ ಮುಟಗಿ, ಗೀತಾ ಹರಿಜನ, ವಿಶ್ವ ತಿಮ್ಮಾಪೂರ ಸೇರಿದಂತೆ ನಗರಸಭೆಯ ಸಿಬ್ಬಂದಿ ವರ್ಗದವರು, ಪೌರ ಕಾರ್ಮಿಕರು ಉಪಸ್ಥಿತರಿದರು.

## ಸಂಕನೂರ ನರ್ಸಿಂಗ್ ಕಾಲೇಜಿನಲ್ಲಿ ಗಾಂಧಿ ಜಯಂತಿ

**■ವಿಜಯಸಾಕ್ಷಿ ಸುದ್ದಿ, ಗದಗ**


ಇಲ್ಲಿನ ಸಂಕನೂರ ಆಸ್ಪತ್ರೆ ಹಾಗೂ ನರ್ಸಿಂಗ್ ಕಾಲೇಜಿನಲ್ಲಿ ಮಹಾತ್ಮ ಗಾಂಧೀಜಿ ಜಯಂತಿಯನ್ನು ಆಚರಿಸಲಾಯಿತು. ಕಾಲೇಜಿನ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಮಹಾತ್ಮ ಗಾಂಧೀಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.ಸಂಕನೂರ ನರ್ಸಿಂಗ್ ಕಾಲೇಜು ಹಾಗೂ ಆಸ್ಪತ್ರೆಯ ಸುತ್ತಮುತ್ತಲೂ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಿಬ್ಬಂದಿಗಳು ಸೇರಿ ಸ್ವಚ್ಛತಾ ಅಭಿಯಾನ ಕೈಗೊಂಡರು. ಈ ಸಂದರ್ಭದಲ್ಲಿ ಡಾ. ಪ್ರಕಾಶ ಸಂಕನೂರ, ಡಾ. ರಾಜೇಶ ಜನ್ನಾ, ಕಾಲೇಜಿನ ಆಡಳಿತಾಧಿಕಾರಿ ವಿನ್ಸೆಂಟ್ ಪಾಟೀಲ ಹಾಗೂ ಕಾಲೇಜಿನ ಪ್ರಾಧ್ಯಾಪಕರು ಪಾಲ್ಗೊಂಡಿದ್ದರು.



## ನಾಡಿಗೆ ಬಂದ ಆನೆಗಳನ್ನು ಕಾಡಿಗಟ್ಟಲು ಡ್ರೋನ್‌ಗಳ ಬಳಕೆ

**■ವಿಜಯಸಾಕ್ಷಿ ಸುದ್ದಿ, ಮಂಡ್ಯ**

ಮಂಡ್ಯ ಪಟ್ಟಣದಲ್ಲಿ ಆನೆಗಳ ಹಿಂಡು ಆತಂಕ ಮೂಡಿಸಿದ್ದು, ಮಂಡ್ಯ ಸಿಟಿಯಿಂದ ಸ್ವಲ್ಪ ದೂರದಲ್ಲೇ ಆನೆ ಹಿಂಡು ಪತ್ತೆಯಾಗಿದೆ. ಆನೆಗಳನ್ನು ಕಾಡಿಗಟ್ಟಲು ಡ್ರೋನ್‌ಗಳನ್ನು ಬಳಸಲಾಗುತ್ತಿದೆ.



5 ಕಾಡಾನೆಗಳು ಒಂದು ವಾರದಿಂದ ಬೀಡು ಬಿಟ್ಟಿದೆ. ಅರಣ್ಯ ಇಲಾಖೆ ಅಧಿಕಾರಿಗಳಿಂದ ಆನೆ ಕಾಡಿಗಟ್ಟುವ ಕಾರ್ಯ ನಡೆದಿದೆ. ಆನೆ ಕಾರ್ಯಾಚರಣೆಗೆ ಮಂಡ್ಯ ಕಾಂಗ್ರೆಸ್ ಶಾಸಕ ರವಿಕುಮಾರ್ ಗೌಡ ಅವರು ಸಾಥ್ ನೀಡಿದ್ದಾರೆ.

ಮಂಡ್ಯ ನಗರದ ಸಮೀಪವೇ ಆನೆಗಳು ಬೀಡು ಬಿಟ್ಟು ಆತಂಕ ಸೃಷ್ಟಿಸಿದೆ. ಆನೆಗಳನ್ನು ಕಾಡಿಗಟ್ಟಲು ಅರಣ್ಯ ಇಲಾಖೆ ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ. ಸೋಮವಾರ ರಾತ್ರಿ ಡ್ರೋಣ್ ಬಳಕೆ ಮಾಡಿ ಮುಂಜಾನೆ 5 ಗಂಟೆವರೆಗೆ ಶೋಧ ನಡೆಸಲಾಗಿದೆ. ಡ್ರೋಣ್ ಮೂಲಕ ಶಬ್ದ ಮಾಡುತ್ತಾ ಕಾಡಿಗಟ್ಟುವ ಕಾರ್ಯ ನಡೆದಿದೆ.

ರಾತ್ರಿಯಿಡೀ ಕಾರ್ಯಾಚರಣೆಯಿಂದ ಆನೆಗಳು 8 ಕಿಮೀ ಸಾಗಿದೆ. ಸಿಬ್ಬಂದಿಗಳು ಸಂಜೆ 6 ಗಂಟೆ ಬಳಿಕ ಮತ್ತೆ ಕಾರ್ಯಾಚರಣೆ ನಡೆಸಲಿದ್ದಾರೆ.

ಚಿಕ್ಕಮಂಡ್ಯದಿಂದ ಬೂದನೂರು ಕಡೆಗೆ 4 ಗಂಡು, 1 ಹೆಣ್ಣಾನೆ ಸಾಗಿದೆ.

## ಛಲವಾದಿ ಮಹಾಸಭಾದ ಜಿಲ್ಲಾ ಯುವ ಘಟಕಾಧ್ಯಕ್ಷರ ಆಯ್ಕೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ನಗರದ ಕಬ್ಬಿಗರ ಕೂಟದಲ್ಲಿ ನಡೆದ ಜಿಲ್ಲಾ ಛಲವಾದಿ ಮಹಾಸಭಾದ ಪದಾಧಿಕಾರಿಗಳ ಆಯ್ಕೆ ಸಮಾರಂಭದಲ್ಲಿ ಜಿಲ್ಲೆಯ ಯುವಜನರನ್ನು ಸಂಘಟನಾತ್ಮಕವಾಗಿ ಒಗ್ಗೂಡಿಸಲು ಯುವ ಘಟಕವನ್ನು ರಚಿಸಲಾಗಿದೆ.



ಯುವ ಘಟಕಕ್ಕೆ ಜಿಲ್ಲಾಧ್ಯಕ್ಷರಾಗಿ ಹುಯಿಲಗೋಳ ಗ್ರಾ.ಪಂ ಸದಸ್ಯರು, ಮುಖಂಡರಾದ ಮಿಲಿಂದ ಪ್ರಕಾಶ ಕಾಳೆಯವರನ್ನು ಆಯ್ಕೆ ಮಾಡಲಾಗಿದೆ ಎಂದು ಗದಗ ಜಿಲ್ಲಾ ಛಲವಾದಿ ಮಹಾಸಭಾದ ಅಧ್ಯಕ್ಷ ಆನಂದ ಶಿಂಗಾಡಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗದುಗಿನ ಡಿಜಿಎಂ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ 'ಸ್ವಚ್ಛತಾ ಹಿ ಸೇವಾ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಡಿಜಿಎಮ್ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಭೂದೇಶ್ ಅವರು ಮಾತನಾಡಿ, ಪ್ರತಿಯೊಬ್ಬ ವಿಧ್ಯಾರ್ಥಿಯೂ ಜನರಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಡಾ.ಸುವರ್ಣ ನಿಡಗುಂದಿ, ರವಿಕುಮಾರ್ ಎಚ್, ವಿರೇಂದ್ರಗೌಡ ಪಾಟೀಲ್ ಮುಂತಾದವರಿದ್ದರು.

### ಪೌರಕಾರ್ಮಿಕರ ದಿನಾಚರಣೆಯ ಕ್ರೀಡಾಕೂಟದ ವಿಜೇತರಿಗೆ ಬಹುಮಾನ ವಿತರಣೆ

# ಪೌರಕಾರ್ಮಿಕರು ಆರೋಗ್ಯದ ಬಗ್ಗೆ ಕಾಳಜಿ ವಹಿಸಿ




**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರಸಭೆಯಲ್ಲಿ ಪೌರಕಾರ್ಮಿಕರ ದಿನಾಚರಣೆ ಹಾಗೂ ಸ್ವಚ್ಛತಾ ಲೀಗ್ ಅಭಿಯಾನದ ನಿಮಿತ್ತ ಸೆ.14, 15ರಂದು ಪೌರಕಾರ್ಮಿಕರಿಗೆ ಹಮ್ಮಿಕೊಂಡಿದ್ದ ಕ್ರೀಡಾಕೂಟದಲ್ಲಿ ವಿಜೇತರಿಗೆ ನಗರಸಭೆ ಅಧ್ಯಕ್ಷೆ ಉಷಾ ಮಹೇಶ ದಾಸರ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪೌರಕಾರ್ಮಿಕರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ, ದುಶ್ಚಟಗಳಿಂದ ದೂರವಿರಬೇಕು. ನಗರದ ಸ್ವಚ್ಛತೆಗಾಗಿ ನಿಮ್ಮ ಸೇವೆ ಅತ್ಯಮೂಲ್ಯವಾಗಿದೆ ಎಂದರಲ್ಲದೆ, ವಿಜೇತರಿಗೆ ಶುಭ ಕೋರುತ್ತ, ಸ್ಪರ್ಧೆಯಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡ ಎಲ್ಲ ಪೌರಕಾರ್ಮಿಕರಿಗೆ ಅಭಿನಂದನೆ ಸಲ್ಲಿಸಿದರು.

ಪುರುಷರ 100ಮೀ. ಓಟದಲ್ಲಿ ಮುತ್ತು ಸೋಂಪೂರ ಪ್ರಥಮ, ಬುಡ್ಡೆಸಾಬ ಅರಳಿಗಿಡದ ದ್ವಿತೀಯ, ಕೃಷ್ಣಾ ಪರಾಪೂರ ತೃತೀಯ, ಗುಂಡು ಎಸೆತದಲ್ಲಿ ಪರಶುರಾಮ ಗುಡಿಮನಿ ಪ್ರಥಮ, ಮಂಜುನಾಥ ಕಡಬರ ದ್ವಿತೀಯ, ಮುತ್ತಪ್ಪ ದೊಡ್ಡಮನಿ ತೃತೀಯ ಸ್ಥಾನ ಪಡೆದರು. ಕಬಡ್ಡಿಯಲ್ಲಿ ಡೈಮಂಡ್ಸ್ ತಂಡ ಪ್ರಥಮ, ಆದಿತ್ಯ ಎಲ್-1 ದ್ವಿತೀಯ, ಕ್ರಿಕೆಟ್‌ನಲ್ಲಿ ಡೈಮಂಡ್ಸ್ ಪ್ರಥಮ, ಜೈ ಭೀಮ ದ್ವಿತೀಯ ಸ್ಥಾನ ಗಳಿಸಿತು.

ಮಹಿಳೆಯರ ವಿಭಾಗದಲ್ಲಿ 100ಮೀ ಓಟದಲ್ಲಿ ದುರಗವ್ವ ದೊಡಮನಿ ಪ್ರಥಮ, ಕನಕವ್ವ ದೊಡ್ಡಮನಿ ದ್ವಿತೀಯ, ಮೀನಾಕ್ಷಿ ದೊಡಮನಿ ತೃತೀಯ ಸ್ಥಾನ ಪಡೆದರು. ಲಿಂಬೂ ಸ್ಪೂನ್‌ನಲ್ಲಿ ಯಲ್ಲವ್ವ ದೊಡಮನಿ ಪ್ರಥಮ, ಲಲಿತಾ ಕಾಳೆ ದ್ವಿತೀಯ, ಮಾತಂಗಿ ಹಾದಿಮನಿ ತೃತೀಯ ಸ್ಥಾನ, ಹಗ್ಗ ಜಗ್ಗಾಟದಲ್ಲಿ ದುರ್ಗಾದೇವಿ ಪ್ರಥಮ, ಜೈ ಭೀಮ ದ್ವಿತೀಯ ಸ್ಥಾನ ಪಡೆದುಕೊಂಡರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಸುನಂದ ಪ್ರಕಾಶ್, ಪೌರಾಯುಕ್ತ ಗಂಗಪ್ಪ, ಅಭಿಯಂತರರಾದ ಎಂ.ಎಚ್.ಎ ಬಂಡಿವಡ್ಡರ್, ಟಿ.ಹೆಚ್ ದ್ಯಾವನೂರ, ಕಚೇರಿಯ ವ್ಯವಸ್ಥಾಪಕ ಪರಶುರಾಮ್ ಶೇರಖಾನ್, ಸದಸ್ಯರಾದ ವಿದ್ಯಾವತಿ ಗಡಗಿ, ನಮಾಜಿ, ಸಿಬ್ಬಂದಿಗಳಾದ ಎ.ಎನ್ ಪುಣೇಕರ, ನಾಗರಾಜ್ ಗುರಣ್ಣವರ್, ಪರಿಸರ ಅಭಿಯಂತರ ಆನಂದ್ ಬದಿ, ಎಂ.ಎಂ ಮಕಾನದಾರ, ಹೇಮಶ ಯುಟ್ಟಿ, ಸಿ.ಆರ್ ಹಾದಿಮನಿ, ಕಂಚಪ್ಪ ಪೂಜಾರಿ, ಸಣ್ಣಪ್ಪ ಬೋಳಮ್ಮನವರ್, ಅರವಿಂದ ಕುರ್ತಕೋಟಿ, ಸಂಕನಗೌಡ್ರು, ಶ್ರೀಮತಿ ಮಕಾನದಾರ, ಶ್ರೀಮತಿ ಯಾದವಾಡ, ಸಂಜು ಅಗಸಿಮನಿ, ಆಂಜನಯ್ಯ ಬಳ್ಳಾರಿ, ಎಸ್.ವ್ಹಿ ತೋಟಗಿ, ಕಡೇಮನಿ, ಹಿರೇಮಠ ಎಂ. ಕೆ., ಗುಡಿಸಾಗರ, ರಾಜು ಕಾಗನೂರ, ರಾಕೇಶ ಮುಟಗಿ, ಗೀತಾ ಹರಿಜನ, ವಿಶ್ವ ತಿಮ್ಮಾಪೂರ ಉಪಸ್ಥಿತರಿದರು.

ಪುರುಷರ ಕಬಡ್ಡಿಯಲ್ಲಿ ಪರಶುರಾಮ ಪೂಜಾರ, ಕೃಷ್ಣಾ ಕಲ್ಮನಿ, ಸಂತೋಷ ಅಕ್ಕಿ, ಪರಶುರಾಮ ಗುಡಿಮನಿ, ಆಕಾಶ ಹಲಗಿ, ಪಕೀರೇಶ ಹೊಸಳ್ಳಿ, ರಾಮು ಕಟ್ಟಿಮನಿ, ಕ್ರಿಕೆಟ್‌ನಲ್ಲಿ ಡೈಮಂಡ್ಸ್ ತಂಡದ ಆಟಗಾರರಾದ ಆಂಜನೇಯ ಪೂಜಾರ, ವಿಠ್ಠಲ ಪರಾಪೂರ, ಸಂತೋಷ ಅಕ್ಕಿ, ಸುರೇಶ ರಾಮಗಿರಿ, ಶ್ರವಣ ಹೊಸಪೇಟೆ, ರಾಜು ಭರಮ್ಮನವರ, ರಾಘು ಹಾದಿಮನಿ, ಲಕ್ಷ್ಮಣ ಕೋಟ್ನಿಕಲ್, ಪರಶುರಾಮ ಸಂಗಾಪೂರ, ಗಣೇಶ ಅಕ್ಕಿ, ವಿನಾಯಕ ಒಳಗುಂದಿ, ರಾಘವೇಂದ್ರ ಬಳ್ಳಾರಿ ಬಹುಮಾನ ಪಡೆದುಕೊಂಡರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka